

ನಿಶಾಂತ್–ನೀತಾ ದಂಪತಿ ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್‌ಗಳು. ಮದುವೆಯಾಗಿ ನಾಲ್ಕು ವರ್ಷಗಳಾಗಿವೆ. ಪ್ರೇಮಿಸಿ ಮದುವೆಯಾದ ದಂಪತಿ ಮಗು ಪಡೆಯಬೇಕೆಂದು ಯೋಚಿಸಿದ್ದೇ ಮದುವೆಯಾಗಿ ಮೂರು ವರ್ಷಗಳ ಬಳಿಕ. ಪ್ರೇಮಿಸಿದಷ್ಟೇ ಸಲೀಸಾಗಿ ಮಗುವೂ ಪ್ರಾಪ್ತಿಯಾಗುತ್ತದೆ ಎಂದು ಅಂದುಕೊಂಡವರಿಗೆ ಕಾದಿತ್ತು ಭ್ರಮನಿರಸನ. ಎಷ್ಟು ಪ್ರಯತ್ನಪಟ್ಟರೂ ಮಗುವಾಗುವ ಸೂಚನೆಯೇ ಇಲ್ಲ. ಬೇಸತ್ತು ವೈದ್ಯರ ಬಳಿ ಹೋಗಿ ಪರೀಕ್ಷೆ ಮಾಡಿಸಿದ್ದಾಯಿತು. ಫಲಿತಾಂಶ ನೋಡಿದಾಗ ನೀತಾಳಲ್ಲಿ ಯಾವುದೇ ಸಮಸ್ಯೆಗಳಿರಲಿಲ್ಲ. ತೊಂದರೆ ಇದ್ದದ್ದು ನಿಶಾಂತ್‌ನಲ್ಲಿಯೇ. ಅನಿಯಂತ್ರಣದಲ್ಲಿದ್ದ ಮಧುಮೇಹ, ಶೀಘ್ರಸ್ಖಲನ ಸಮಸ್ಯೆ, ಗುಣಮಟ್ಟದ ವೀರ್ಯಾಣುಗಳ ಸಂಖ್ಯೆ ಕಡಿಮೆ ಇದ್ದದ್ದು ಈ ದಂಪತಿಗೆ ಮಗುವಾಗಲು ಸವಾಲಾಗಿ ಪರಿಣಮಿಸಿತ್ತು.

‘ಐವಿಎಫ್’ ಮೂಲಕ ಚಿಕಿತ್ಸೆ ಪಡೆದುಕೊಂಡ ಬಳಿಕ ದಂಪತಿಗೆ ಸಂತಾನಭಾಗ್ಯ ಒಲಿದು ಬಂದಿತ್ತು. ನೀತಾ ಈಗ ಗರ್ಭಿಣಿ.

***

ಶೀತಲ್–ಗಗನ್ ದಂಪತಿಯ ಇನ್ನೊಂದು ಉದಾಹರಣೆ ಇಲ್ಲಿದೆ ನೋಡಿ. ಶೀತಲ್‌ಗೆ ಮೂವತ್ತೊಂದು ವರ್ಷ. ಗಗನ್‌ಗೆ ನಲವತ್ತು. ಮದುವೆಯಾಗಿ ಹತ್ತು ವರ್ಷಗಳ ಮೇಲಾಗಿದೆ. ಮಡಿಲಲ್ಲಿ ಮಗುವಿಲ್ಲದೆ, ಮನೆಯಲ್ಲಿ ನಗುವಿಲ್ಲದೆ ಇಡೀ ಕುಟುಂಬ ನಲುಗಿಹೋಗಿತ್ತು. ಕಂದನ ವಿಚಾರ ಬಂದರೆ ದಂಪತಿ ಮಂಕಾಗಿ ಕೂರುವ ಸನ್ನಿವೇಶ ಸೃಷ್ಟಿಯಾಗಿತ್ತು. ರೂಢಿಯಂತೆ ಇಬ್ಬರೂ ಪರೀಕ್ಷೆಗೊಳಗಾದರು. ಶೀತಲ್ ಆರೋಗ್ಯದಲ್ಲಿ ಸಮಸ್ಯೆ ಇರಲಿಲ್ಲ. ಆದರೆ ಗಗನ್ ವೀರ್ಯದಲ್ಲಿ ಆರೋಗ್ಯಪೂರ್ಣವಾದ ಒಂದು ವೀರ್ಯಾಣುವೂ ಕಂಡುಬರದೆ ಆತ ‘ಅಜೂಸ್ಪರ್ಮಿಯ’ ಎಂಬ ತೊಂದರೆಯಿಂದ ಬಳಲುತ್ತಿದ್ದ. ಸೂಕ್ತ ಚಿಕಿತ್ಸೆ ನೀಡಿದ ಬಳಿಕ ಕೃತಕ ಗರ್ಭಧಾರಣೆ (ಐವಿಎಫ್) ಮಾಡಲಾಯಿತು. ಪತ್ನಿ ಗರ್ಭವತಿಯಾದಳು. ದುರದೃಷ್ಟವಶಾತ್ ಅಬಾರ್ಷನ್ ಆಯಿತು. ಎರಡನೇ ಬಾರಿ ಐವಿಎಫ್ ಪ್ರಯತ್ನಿಸಿದಾಗ ಯಶಸ್ವಿಯಾಯಿತು. ಈಗ ಶೀತಲ್ ಗರ್ಭಿಣಿಯಾಗಿದ್ದು, ವಂಶದ ಕುಡಿಯ ನಿರೀಕ್ಷೆಯಲ್ಲಿದೆ ಕುಟುಂಬ.

ಈ ಮೇಲಿನ ಉದಾಹರಣೆಗಳು ಸಂತಾನಹೀನತೆಗೆ ಪುರುಷರಿಗಿರುವ ಕಾರಣ ಎಂಬುದನ್ನು ಎತ್ತಿತೋರಿಸುತ್ತದೆ. ರಾಜ್ಯದಲ್ಲಿರುವ ಎಲ್ಲಾ ಐವಿಎಫ್ ಕೇಂದ್ರಗಳಲ್ಲೂ ಇಂಥದ್ದೇ ನೂರಾರು ಪ್ರಕರಣಗಳು ಕಾಣಸಿಗುತ್ತವೆ. ಅಲ್ಲದೆ ಐವಿಎಫ್ ಕೇಂದ್ರಗಳಿಗೆ ಬರುವ ಪತಿ–ಪತ್ನಿಯರ ಪರೀಕ್ಷೆಯಲ್ಲಿ ವಂಶಾಭಿವೃದ್ಧಿ ವಿಚಾರದಲ್ಲಿ ತೊಂದರೆ ಇರುವುದು ಪುರುಷರಲ್ಲೇ ಹೆಚ್ಚು ಎಂಬುದು ಬೆಳಕಿಗೆ ಬಂದಿದೆ.

ಮದುವೆಯ ನಂತರ ಸಹಜವಾಗಿ ಪ್ರತಿ ಮನೆಗಳಲ್ಲೂ ಪುಟ್ಟ ಕಂದನ ಆಗಮನದ್ದೇ ನಿರೀಕ್ಷೆ. ಹಿರಿಯರಿಗೋ ಮನೆ ಮಗುವಿನ ಲಾಲನೆ ಪಾಲನೆಯ ಕನಸು. ಮದುವೆಯಾಗಿ ನಾಲ್ಕೈದು ವರ್ಷಗಳಾದರೂ ಹೊಸ ಜೀವ ಮೊಳೆಯುವ ಸುದ್ದಿಯೇ ಇಲ್ಲದಾಗ ಮನೆಯಲ್ಲಿ ಇರುತ್ತಿದ್ದ ಸಂತೋಷ, ಚೈತನ್ಯ ಎಲ್ಲವೂ ಮಾಯ. ‘ಈ ಹೆಣ್ಣು, ಮಗು ಹೆರಲು ಅಸಮರ್ಥಳು’ ಎಂಬುದೇ ಮೊದಲ ತೀರ್ಮಾನ. ದಂಪತಿ ಮಧ್ಯೆ ಭಾವನೆಗಳ ಏರುಪೇರು. ಕೆಲವೊಮ್ಮೆ ದೊಡ್ಡ ಬಿರುಕು ಕೂಡ. ಮನೆಮಂದಿಯ ಮಧ್ಯೆಯೇ ಮಾಯವಾಗುವ ಭಾವಗಳ ಒರತೆ. ಕೆಲವು ಕುಟುಂಬಗಳಲ್ಲಿ ಜೀವನವೇ ವ್ಯರ್ಥ ಎನ್ನುವ ಕೊರಗು, ಒಂದು ರೀತಿಯ ವಿಷಾದದ ಭಾವ.



ಇದು ಸಂತಾನಹೀನತೆಯ ಲಕ್ಷಣ. ಸಂತಾನಹೀನತೆ ಎಂಬುದು ಕಂದನ ಹಂಬಲದಲ್ಲಿರುವ ಪ್ರತಿ ಕುಟುಂಬಕ್ಕೂ ಒಂದು ಶಾಪ. ‘ಮಗುವೇ ಸರ್ವಸ್ವ’ ಎಂದು ಭಾವಿಸುವ ಕುಟುಂಬಗಳು ಖಿನ್ನತೆಗೆ ಜಾರಿರುವ ಉದಾಹರಣೆಗಳೂ ಇವೆ. ವಿಚಿತ್ರ ಎಂದರೆ, ಸಂತಾನಹೀನತೆ ವಿಷಯ ಬಂದಾಗ ಬಹುತೇಕ ಪ್ರಕರಣಗಳಲ್ಲಿ ದೂಷಣೆಗೆ ಒಳಗಾಗುವವಳು ಹೆಣ್ಣೇ ಆಗಿರುತ್ತಾಳೆ. ಇಂತಹ ವಾತಾವರಣ ನಮ್ಮ ಸಮಾಜದಲ್ಲಿ ಇನ್ನೂ ಜೀವಂತ ಎಂಬುದು ವಿಪರ್ಯಾಸ. ಮಗು ಜನಿಸುವುದರಲ್ಲಿ ಪುರುಷನ ಪಾತ್ರವೂ ಬಹಳ ಮುಖ್ಯ ಎಂಬ ವಿಚಾರ ಎಷ್ಟೋ ಕುಟುಂಬಗಳಲ್ಲಿ ಗೌಣವಾಗಿರುವ ಸಂಗತಿ ವಿಷಾದನೀಯ.

ಇಂದು ಸಂತಾನಹೀನತೆ ಬಹು ದೊಡ್ಡ ಜಾಗತಿಕ ಸಮಸ್ಯೆ. ಜಾಗತಿಕವಾಗಿ ಶೇ.15ರಷ್ಟು ದಂಪತಿ ಬಂಜೆತನದಿಂದ ಬಳಲುತ್ತಿದ್ದಾರೆ ಎನ್ನುತ್ತದೆ ಅಂಕಿಅಂಶ. ಈ ಸಮಸ್ಯೆಗೆ ಪ್ರಮುಖ ಕಾರಣ, ಬದಲಾಗುತ್ತಿರುವ ಜೀವನಶೈಲಿ, ಆಹಾರ ಪದ್ಧತಿ, ಅತಿಯಾದ ಮಾನಸಿಕ ಒತ್ತಡ, ಕಲುಷಿತ ವಾತಾವರಣ ಮೊದಲಾದವು ಎಂಬುದನ್ನು ವೈದ್ಯಲೋಕ ನೀಡುತ್ತದೆ. ಈ ಸಮಸ್ಯೆ ಭವಿಷ್ಯದಲ್ಲಿ ಇನ್ನೂ ಉಲ್ಬಣಿಸುವ ಸಾಧ್ಯತೆ ಇದೆ ಎಂದು ಎಚ್ಚರಿಸುತ್ತಾರೆ ವೈದ್ಯರು.